ಆ ರೀತಿ ಮಾಡಿ ತಾವು ಹೆಚ್ಚಿನ ಕೀರ್ತಿಯನ್ನು ಪಡೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಮಾನ್ಯ ಉಪಾಧ್ಯಕ್ಷರೆ, 1997-98ನೇ ಸಾಲಿನ ಆಯವ್ಯಯದಲ್ಲಿ ಈ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಅದರಲ್ಲೂ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳನ್ನು ಅನುಧಾನಕ್ಕೆ ಒಳಪಡಿಸತಕ್ಕಂಥ ಪ್ರಸ್ತಾವನೆ ಇಲ್ಲದೇ ಇರುವುದರಿಂದ ಅದೊಂದು ಕಾರಣಕ್ಕಾಗಿ ತಮ್ಮ 1997-98ನೇ ಸಾಲಿನ ಬೇಡಿಕೆಗಳನ್ನು ನಾನು ವಿರೋಧಿಸುತ್ತ ನನಗೆ ಇಷ್ಟು ಮಾತಗಳನ್ನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

ಅಭಯಾರಣ್ಯ ಮಧ್ಯದಲ್ಲಿ ಹಿಂದುಳಿದ ರೈತರು ಬೆಳೆದ ಬೆಳೆಗಳನ್ನು ನಾಶಮಾಡಿರುವುದು

+ ಶ್ರೀ ಚಂದ್ರಶೇಖರ್ ಸದಾಶಿವ ನಾಯಕ್ (ಗೋಕಾಕ್ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ ನಾನು ಕಳೆದ ತಿಂಗಳು 30ನೇ ತಾರೀಖಿನ ದಿವಸ ಕೇಳಿದ ಪ್ರಶ್ನೆಗೆ ಅರಣ್ಯ ಸಚಿವರು ಕೇವಲ ಅಧಿಕಾರಿಗಳ ಉತ್ತರವನ್ನು ಪುನರಾವರ್ತನೆ ಮಾಡಿದ್ದಾರೆ. ಅದು ಸಮಾಧಾನಕರವಾಗಿಲ್ಲ. ರೈತರಿಗೆ ರಕ್ಷಣೆ ಕೊಟ್ಟು ರೈತರ ಹಿತವನ್ನು ಕಾಪಾಡಲಿಕ್ಕೆ ಇದ್ದಂಥ ನಮ್ಮ ಸರ್ಕಾರ ಕಳೆದ ತಿಂಗಳ ಜುಲೈನಲ್ಲಿ ಅರಣ್ಯ ಇಲಾಖೆಯಿಂದ 1975 ರಿಂದ ಸಾಗುವಳಿ ಮಾಡಿಕೊಂಡು ಬಂದಂಥ ಹಿಂದುಳಿದ ಜನಾಂಗಕ್ಕೆ ಒಳಪಟ್ಟಂಥ - ರೈತರು ಬೆಳೆಗಳನ್ನು ನಾಶಮಾಡಿಕೊಂಡು ಅದಕ್ಕೆ ಪರಿಹಾರ ಇಲ್ಲದೆ ಕೊರಗುವಂಥ ಪರಿಸ್ಥಿತಿ ಬಂದಿದೆ. ಅದಕ್ಕೆ ಅರಣ್ಯ ಸಚಿವರು ಕೊಟ್ಟಂಥ ಉತ್ತರದಲ್ಲಿ ಆದಂಥ ಬೆಳೆಗಳಿಗೆ ಪರಿಹಾರ ಇಲ್ಲವೆಂದು ಹೇಳಿದ್ದಾರೆ. ಆ ಮೇಲೆ 80 ಹೆಕ್ಟೇರ್ ಜಮೀನು ವಶಪಡಿಸಿಕೊಳ್ಳುವಂಥ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ ಎಂದು ಹೇಳಿದ್ದಾರೆ. ಆದರೆ, ನಾವು ಕೇಳುವಂಥ ಜಮೀನು ಕೇವಲ 23 ಹೆಕ್ಟೇರ್, 23 ಹೆಕ್ಟೇರ್ ನಲ್ಲಿ ಮಾತ್ರ ಅವರು ಬೆಳೆಗಳನ್ನು ನಾಶ ಮಾಡಿದ್ದಾರೆ. ಆ ಬೆಳೆಗಳನ್ನು ನಾಶ ಮಾಡುವಂಥ ಒಂದು ಪದ್ಧತಿ ಎಂದರೆ ಮಿಲ್ಟ್ರೀ ತರಹ ಬಂದೂಕುಗಳನ್ನು ಹಿಡಿದುಕೊಂಡು, ಹೆಲ್ಮೆಟ್ ಹಾಕಿಕೊಂಡು, ಸುತ್ತುಕಟ್ಟಿ ನಿಂತು ಎಲ್ಲ ರೈತರನ್ನು ಹೆದರಿಸಿ ಅವರನ್ನು ಹೊಡೆದು ಅವಾಚ್ಯ ಶಬ್ಧಗಳಿಂದ ಬೈದು ಹೀನಾಯವಾಗಿ ಅವರ ಮೇಲೆ ಕಲ್ಲೆಸೆದು ಅವರನ್ನು ಓಡಿಸಿ ಬೆಳೆಗಳನ್ನು ನಾಶ ಮಾಡಿದ್ದಾರೆ. ಅದಕ್ಕೆ ಪರಿಹಾರ ಕೊಡಿ ಎಂದು ಕೇಳಿದರೆ ಆ ಪರಿಹಾರ ಒಂದು ಕಥೆ ಇರಲಿ, ಅವರನ್ನು ಸಹಿತ ಸುಮ್ಮನೆ ಬಿಡುತ್ತಿಲ್ಲ ಎನ್ನುವಂಥ ವಿಚಾರವನ್ನು ಸಚಿವರ ಗಮನಕ್ಕೆ ತರುತ್ತಿದ್ದೇನೆ. ಇನ್ನು ಈ ವಿಷಯವನ್ನು ಮಾನ್ಯ ಸಚಿವರ ಜೊತೆ ಚರ್ಚೆ ಮಾಡಿ ಅವರಿಗೆ ವಿವರವಾದ ವರದಿಯನ್ನು ಒಪ್ಪಿಸಿ ಇದು ಹೀಗೆ ಆಗಬಾರದಾಗಿತ್ತು ಅವರು ದಾಖಲೆ ಹೊಂದಿದ್ದಾರೆ 1978ರ ಪೂರ್ವದ ದಾಖಲೆ ಅವರ ಹತ್ತಿರ ಇದೆ, ಅವರ ತಂದೆ ಕಾಲದಿಂದ ಅವರು ತಮ್ಮ ಜಮೀನನ್ನು ಮಾಡಿಕೊಂಡು ಬಂದಿದ್ದಾರೆ ಎನ್ನತಕ್ಕಂಥ ವಿಚಾರದಲ್ಲಿ ಅಲ್ಲಿರತಕ್ಕಂಥ ಮಾವಿನ ಗಿಡಗಳು, ಬಾಳೆಗಿಡಗಳು ಅವೆಲ್ಲಾ ಸಾಕ್ಷಿಯಾಗಿವೆ. ಇಷ್ಟೆಲ್ಲಾ ಆದಮೇಲೆ ನಾವು ಅವರಿಗೆ ಬೇರೆ ಕಡೆ ಜಮೀನು ಕೊಡುತ್ತೇವೆ ಎಂದು ಅಧಿಕಾರಿಗಳು ಉತ್ತರದಲ್ಲಿ ಹೇಳುತ್ತಾರೆ ಬೇರೆ ಕಡೆ ಜಮೀನು ಕೊಡುತ್ತಾರೆ ಎಂದರೆ ಅವರಿಗೆ ಅರ್ಹತೆ ಇದ್ದಹಾಗೆ ಎಂದು

ಅರ್ಥವಾಯಿತು. ಬೇರೆ ಕಡೆ ಜಮೀನು ಕೊಡುವಂಥ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇದೆ ಎನ್ನುವಂಥ ವಿಚಾರವನ್ನು ಅವರು ಇಲ್ಲಿ ಹೇಳಿದ್ದಾರೆ. ಕೇಂದ್ರ ಸರ್ಕಾರ ಕೊಡುವಂಥ ಜಮೀನು ಬೇರೆ ಕಡೆ ಕೊಡತಕ್ಕಂಥ ಜಮೀನು ಹಾಗೂ ಈಗ ಇದ್ದಂಥ ಜಮೀನಿಗೆ ಎಷ್ಟು ಅಂತರ ಇದೆ ಎಂದರೆ ಹತ್ತು ವರ್ಷ ಸಾಗುವಳಿ ಮಾಡಿದರೂ ಆ ಭೂಮಿಯಲ್ಲಿ ಬೆಳೆ ಉಳುಮೆ ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಅಧಿಕೃತ ಇದ್ದಂಥ ಜಮೀನಿನಲ್ಲಿ ಈ ಬೆಳೆಗಳ ನಾಶವಾಯಿತು. ಗೋಕಾಕ್ ಮತ್ತು ಹುಕ್ಕೇರಿ ತಾಲ್ಲೂಕಿನಲ್ಲಿ 4500 ಹೆಕ್ಟೇರ್ ಜಮೀನು ಅಕ್ರಮವಾಗಿದೆ. ಅದರ ಬಗ್ಗೆ ಎಲ್ಲೂ ಬೆಳೆನಾಶ ಇಲ್ಲ, ಬುಲ್ಡೋಜರ್ ಹಚ್ಚಿಲ್ಲ ಏನೂ ಇಲ್ಲ. ಆದರೆ ಇದನ್ನು ನಾವು ಸುಪ್ರೀಮ್ ಕೋರ್ಟ್ ಆರ್ಡರ್ ಪ್ರಕಾರ ಮಾಡಿದ್ದೇವೆ ಎಂದು ಹೇಳುತ್ತಾರೆ. ಸುಪ್ರೀಮ್ ಕೋರ್ಟ ಆರ್ಡರ್‌ನಲ್ಲಿ ಏನು ಹೇಳುತ್ತಾರೆ ಎಂದರೆ 1978 ರ ಪೂರ್ವದಲ್ಲಿ ಯಾರು ಜಮೀನನ್ನು ಉಳುಮೆ ಮಾಡಿದ್ದಾರೆ ಅವರು ಅಧಿಕೃತವಾಗಿ ಸಕ್ರಮ ಆಗಲಿಕ್ಕೆ ಯೋಗ್ಯವಾಗಿದ್ದಾರೆ. ಎನ್ನುವಂಥ ಮಾತು ಹೇಳುತ್ತದೆ. ಆದರೆ ಅನಧಿಕೃತವಾಗಿ ಇದ್ದಂಥ ಸಾವಿರಾರು ಎಕರೆ ಜಮೀನಿನಲ್ಲಿ ಅವರು ಯಾವುದೇ ತರಹ ಕೆಲಸವನ್ನು ಕೈಗೊಳ್ಳುತ್ತಿಲ್ಲ. ಇನ್ನು ಇವರಿಗೆ ಹತ್ತಿರ ಇದ್ದಂಥ 100 ಹೆಕ್ಟೇರ್ ಪಡ ಬಿದ್ದಂಥ ಜಮೀನಿನಲ್ಲಿ ಯಾವುದೇ ತರಹ ಗಿಡ ನೆಡುವ ಕೆಲಸ ನಡೆದಿಲ್ಲ. ಅಲ್ಲಿ ಟೆಂಟ್ ಹೊಡೆದುಕೊಂಡು, ಬಂದೂಕು ಹಿಡಿದುಕೊಂಡು ಅಡಿಗೆ ಮಾಡಿ, ಊಟ ಮಾಡಿಕೊಂಡು ಆ ರೈತರನ್ನು ಹೆದರಿಸುವಂಥ ಸನ್ನಿವೇಶ ಉದ್ಭವವಾಗಿದೆ. ಈ ವಿಷಯವಾಗಿ 21ನೇ ತಾರೀಖು ನಾನು ಮತ್ತು ತಾಲ್ಲೂಕು ಹಾಗೂ ಜಿಲ್ಲಾಪಂಚಾಯತ್ ಸದಸ್ಯರು ಅಲ್ಲಿ ಹೋಗಿದ್ದೆವು. ನಾವು ಅಲ್ಲಿ ಒಂದು ವೇಳೆ ಹೋಗದೇ ಇದ್ದಪಕ್ಷದಲ್ಲಿ ಅಲ್ಲಿ ಜೀವ ಹಾನಿ ಆಗುವ ಪರಿಸ್ಥಿತಿ ಇತ್ತು. ಅಲ್ಲಿ ಇದ್ದಂಥ ಫಾರೆಸ್ಟರ್ ಹತ್ತಿರ ಕೂಡ 15 ಎಕರೆ ಅನಧಿಕೃತ ಜಮೀನು ಇದೆ. ಅವನು ಅಲ್ಲಿ ಉಳುಮೆ ಮಾಡುತ್ತಿದ್ದಾನೆ, ಬೆಳೆ ತೆಗೆಯುತ್ತಿದ್ದಾನೆ. ಅವರ ಜಮೀನಿಗೆ ಯಾರೂ ಕೈ ಹಚ್ಚಿಲ್ಲ. ಹೆಚ್ಚಾಗಿ ಹಿಂದುಳಿದ ವರ್ಗದ, ಎಸ್‌ಸಿ-ಎಸ್‌ಟಿ ರೈತರ ಜಮೀನಿನಲ್ಲಿರುವ ಬೆಳೆ ಇವೊತ್ತು ನಾಶವಾಗಿ ಸುಮಾರು 15 ರಿಂದ 20 ಲಕ್ಷ ರೂಪಾಯಿಗಳ ಹಾನಿಯಾಗಿದೆ. ಇನ್ನು ಖಾಲಿ ಇರತಕ್ಕಂಥ ಜಮೀನಿನಲ್ಲಿ ಗಿಡಗಳನ್ನು ನೆಡುವುದನ್ನು ಬಿಟ್ಟು ಇ.ಎ.ಎಸ್.ನಲ್ಲಿ ಕೊಟ್ಟಂಥ ದುಡ್ಡನ್ನು ಕೇವಲ ಈ ಸಾಗು ಮಾಡುವಂಥ ಜಮೀನಿನಲ್ಲಿ ಹಚ್ಚುವಂಥ ಉದ್ದೇಶ ಏನು? ಆಮೇಲೆ ಆ ಜಮೀನು ವಶಪಡಿಸಿಕೊಂಡಿದ್ದು ಅಧಿಕಾರಿಗಳ ಕರ್ತವ್ಯ ಎಂದು ಅಧಿಕಾರಿಗಳು ತಮ್ಮ ಉತ್ತರದಲ್ಲಿ ಹೇಳುತ್ತಾರೆ. ಆದರೆ ಅದೇ ಸ್ಥಳದಲ್ಲಿ ಇರುವಂಥ ಸುಮಾರು 100 ಎಕರೆ ಜಮೀನಿನಲ್ಲಿರುವ ಮಣ್ಣು ಕಲ್ಲು ಹೋಗಿಬಿಟ್ಟು ಅಲ್ಲಿ ಒಂದು ಡ್ಯಾಮ್ ಕಟ್ಟುವಷ್ಟು ಆಳ ಬಿದ್ದಿದೆ. ಹಾಗಾದರೆ ಅಲ್ಲಿಯ ಮಣ್ಣು, ಕಲ್ಲು, ಗಿಡಗಳು ಹೇಗೆ ಹೋದವು? ಅವುಗಳನ್ನು ಕೂಡ ರಕ್ಷಿಸುವುದು ಅವರ ಕರ್ತವ್ಯ ಅಲ್ಲವೇನು ಎನ್ನುವಂಥ ಪ್ರಶ್ನೆ ಉದ್ಭವವಾಗುತ್ತದೆ.

ಇನ್ನು ಪ್ರತಿವರ್ಷ ರೈತರಿಂದ ಅಲ್ಲಿ ಹಣ ವಸೂಲಿ ಮಾಡಿ ಅವರನ್ನು ತಡೆಯುತ್ತಿದ್ದರು. ನೀವು ಹಣ ಕೊಡದಿದ್ದರೆ ಇದನ್ನು ನಾವು ಬಿತ್ತುತ್ತೇವೆ, ನಾವು ಬೆಳೆಯುತ್ತೇವೆ ಎಂದು ಹೇಳುತ್ತಿದ್ದರು. ಈಗ ಎರಡು ವರ್ಷದಿಂದ ಅದು ಬಂದ್ ಇತ್ತು. ಮೊದಲು ಇದ್ದಂಥ ಪರಿಪಾಠ ಈ ಎರಡು ವರ್ಷದಿಂದ ಮುಂದುವರೆಯಲಿಲ್ಲ ಎಂದು ತಿಳಿದುಕೊಂಡು ಈ ವರ್ಷ ಅಧಿಕಾರಿಗಳು ಈ ಕ್ರಮವನ್ನು ಜರುಗಿಸಿದ್ದಾರೆ.

ಅವರು ಯಾವ ರೀತಿ ಬೆಳೆಗಳನ್ನು ನಾಶ ಮಾಡಿದ್ದಾರೆ, ಯಾವ ರೀತಿ ಅವರು ಬಂದೂಕುಗಳನ್ನು ಹಿಡಿದುಕೊಂಡಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ನಾನು ಛಾಯಾ ಚಿತ್ರಗಳನ್ನು ತಂದಿದ್ದೇನೆ. ಅವುಗಳನ್ನು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಒಪ್ಪಿಸುತ್ತೇನೆ. ಆಮೇಲೆ ಈ ಜಮೀನು ವಶಪಡಿಸಿಕೊಳ್ಳುವಂಥ ವಿಚಾರದಲ್ಲಿ ಯಾವುದೇ ತಾಲ್ಲೂಕು ಪಂಚಾಯತ್ ಸದಸ್ಯರಿಗಾಗಲೀ, ಶಾಸಕರಿಗಾಗಲೀ ಜಿಲ್ಲಾ ಪಂಚಾಯತ್ ಸದಸ್ಯರಿಗಾಗಲೀ ಅಥವಾ ಸ್ಥಳೀಯ ಸಮಿತಿಗಾಗಲೀ ಸಂಪರ್ಕಿಸಲಿಲ್ಲ. ಇದು ಸುಪ್ರೀಮ್ ಕೋರ್ಟ್ ಆರ್ಡರ್ ಇದೆ ಎನ್ನುವಂಥ ವಿಚಾರವನ್ನು ಮಾತ್ರ ಹೇಳುತ್ತಾರೆ. ಪಂಚಾಯತ್ ಸದಸ್ಯರನ್ನಾಗಲೀ, ಹಿರಿಯರನ್ನಾಗಲೀ, ಸಂಪರ್ಕಿಸಿ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಬೇರೆ ಕಡೆ ಜಮೀನನ್ನು ಕೊಟ್ಟಿದ್ದರೆ ಈ ಅನಾಹುತ ಆಗುತ್ತಿರಲಿಲ್ಲ. ಎಂದು ತಮ್ಮ ಮುಖಾಂತರ ತಿಳಿಸಲು ಅಪೇಕ್ಷೆ ಪಡುತ್ತೇನೆ.

ಇನ್ನು ಬೆಳೆ ನಾಶದ ಬಗ್ಗೆ ಒಂದು ಉದಾಹರಣೆಯನ್ನು ಸಾಂಕೇತಿಕವಾಗಿ ಹೇಳಬಯಸುತ್ತೇನೆ. 1990ರಲ್ಲಿ ಒಂದು ಬಸ್ ಆಕ್ಸಿಡೆಂಟ್ ಆಯಿತು. ಆ ಬಸ್ಸಿನ ಒಳಗೆ ಹಾಗೂ ಹೊರಗೆ ಟಾಪ್ ಮೇಲೆ ಜನ ಕೂತಿದ್ದರು. ಆ ಬಸ್ ಆಕ್ಸಿಡೆಂಟ್ ಆದಾಗ ಬಸ್ಸಿನೊಳಗೆ ಇರುವವರು ಒಬ್ಬರು ಹಾಗೂ ಟಾಪ್ ಮೇಲೆ ಇರುವವರು ಒಬ್ಬರು ಹೀಗೆ ಇಬ್ಬರು ಸತ್ತರು. ಆತ ಅಪರಾಧಿಯೋ, ನಿರಪರಾಧಿಯೋ ಟಿಕೆಟ್ ತೆಗೆದುಕೊಂಡು ಟಾಪ್‌ಮೇಲೆ ಕುಳಿತುಕೊಂಡಿದ್ದ. ಆದರೆ ಇಬ್ಬರಿಗೂ ಪರಿಹಾರ ದೊರೆಯಿತು. ಆದರೆ ಇವರ ಅಪರಾಧವೇನು? ದಾಖಲೆ ಇದ್ದಾಗ, ಇದ್ದ ದಾಖಲೆಯನ್ನು ಒಪ್ಪಿಸಿದರೂ ಸಹಿತ ಆ ಜಮೀನಿನಲ್ಲಿ ಬೆಳೆಯತಕ್ಕಂಥ ಬೆಳೆ ಹೇಗೆ ನಾಶವಾಯಿತು? ಇನ್ನು ಪರಿಹಾರ ಇಲ್ಲವೆಂದರೆ ಈ ಬಸ್ಸಿನ ಉದಾಹರಣೆ ಸಾಂಕೇತಿಕವಾಗಿದೆ. ಆದಕಾರಣ, ಅವರು ಮಾಡುವಂಥ ಉಪಜೀವನಕ್ಕೆ ಪರಿಹಾರವೇನು? ಇನ್ನು ಎರಡನೇ ಕಡೆ ಕೊಡುವಂಥ ಜಮೀನಿಗೆ ಹತ್ತು ವರ್ಷ ಬೇಕು. ಹತ್ತು ವರ್ಷದವರೆಗೆ ಅವರ ಉಪಜೀವನ ಹೇಗೆ ಎಂದು ಕೇಳಬಯಸುತ್ತೇನೆ.?

ಇನ್ನು ಅರಣ್ಯ ಸಚಿವರು ಕಳಕಳಿಯಿಂದ ಮೇಲಾಧಿಕಾರಿಗಳಿಗೆ ಕೂಲಂಕಷವಾಗಿ ಅದರ ಬಗ್ಗೆ ವಿಚಾರ ಮಾಡಿ ಎಂದು ಬರೆದಾಗ್ಯೂ ಸಹಿತ ಇಲ್ಲಿಯವರೆಗೆ ಅದರ ಬಗ್ಗೆ ವಿಚಾರ ಆಗಿಲ್ಲ. ಇದು ಅಧಿಕಾರಿಗಳು ಮಾಡುವಂಥ ಕೆಲಸದಲ್ಲಿಯ ವಿಳಂಬತನವನ್ನು ಎತ್ತಿ ತೋರಿಸುತ್ತದೆ. ಇನ್ನು ಕೊನೆಯದಾಗಿ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಯಾವುದೇ ಪರಿಸ್ಥಿತಿಯಲ್ಲೂ ಈ ನಾಶವಾದ ಬೆಳೆಗಳಿಗೆ ಪರಿಹಾರ ಸಿಗಬೇಕು. ಅವರಲ್ಲಿರತಕ್ಕಂಥ ದಾಖಲೆಗಳ ಮುಖಾಂತರ ಅವರಿಗೆ ಸಿಗತಕ್ಕಂಥ ಜಮೀನು ಸಿಗಬೇಕು. ಯಾರು ಭೂ ರಹಿತರಿದ್ದಾರೆ ಅವರಿಗೆ ಆ ಜಮೀನನ್ನು ಕೊಡುವಂಥ ವಿಚಾರವನ್ನು ಸರ್ಕಾರ ಕೈಗೆತ್ತಿಕೊಳ್ಳಬೇಕು, ಎನ್ನುವಂಥ ಮಾತನ್ನು ಹೇಳುತ್ತೇನೆ. ಆ ಮೇಲೆ ಈಗಿಂದೀಗ ಅಲ್ಲಿ ನಾಶಪಡಿಸತಕ್ಕಂಥ ಕೆಲಸ ನಿಂತುಬಿಡಬೇಕು, ಎಂದು ವಿನಂತಿಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಆ ಮೇಲೆ ಇದರ ಬಗ್ಗೆ ವಿಚಾರಣೆ ನಡೆಸಿ ಅಲ್ಲಿ ಇದ್ದಂಥ ಅಧಿಕಾರಿಗಳು ತಾವು ಹೊಂದಿದಂಥ ಜಮೀನುಗಳನ್ನು ಮಾತ್ರ ಬಿಟ್ಟು ಮೀಸಲಿದ್ದಂಥ ರೈತರ ಜಮೀನುಗಳನ್ನು ಏಕೆ ನಾಶ ಮಾಡಿದರು ಎಂದು ವಿಚಾರಣೆಯನ್ನು ಮಾಡಿಸಿ. ನನಗೆ ಅರ್ಧ ಗಂಟೆ ಕಾಲವಾವಧಿಯ ಚರ್ಚೆಗೆ ಅವಕಾಶವಿದ್ದರೂ

ನನಗೆ ಹತ್ತು ನಿಮಿಷಗಳನ್ನು ಕೊಟ್ಟಂಥ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಅಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಶ್ರೀ ಎಚ್.ಡಿ. ಬಸವರಾಜ : ಅಧ್ಯಕ್ಷರೇ ಈ ಒಂದು ದಾಳಿಗೆ ಒಳಗಾದವರು ಪರಿಶಿಷ್ಟ ಪಂಗಡದವರು. ತಾವು ಅವರಿಗೆ ಏನು ಪರಿಹಾರವನ್ನು ಕೊಡಬೇಕೆಂದು ಇದ್ದೀರಿ, ಆ ಪರಿಹಾರವನ್ನು ಆದಷ್ಟು ಬೇಗ ಕೊಡಬೇಕು. ಬೇರೆಯವರು ದಾಳಿಗೆ ಒಳಗಾಗಿದ್ದರೆ ಈಗಾಗಲೇ ಪರಿಹಾರ ಸಿಗುತ್ತಾ ಇತ್ತು. ಇದೊಂದು ಆತಂಕದ ವಿಷಯ. ಪರಿಶಿಷ್ಟ ಪಂಗಡದವರಿಗೆ ತೊಂದರೆಯಾಗಿರುವಾಗ ಸರ್ಕಾರ ಏಕೆ ಸೂಕ್ತವಾದ ರಕ್ಷಣೆಯನ್ನು ಕೊಡುವುದಿಲ್ಲ? ತಾವು ಮಾನವೀಯತೆ ದೃಷ್ಟಿಯಿಂದ ಪರಿಶಿಷ್ಟ ಪಂಗಡದವರ ರಕ್ಷಣೆ ಮಾಡುವುದು ಅವಶ್ಯಕವಾಗಿದೆ. ಆದ್ದರಿಂದ, ತಾವು ಆದಷ್ಟು ಅವರಿಗೆ ಬೇಗ ಪರಿಹಾರ ಸಿಗುವಂತೆ ಮಾಡಬೇಕು. ಈಗ ತಾವು ಭೂಮಿ ಕೊಡುತ್ತೇವೆಂದು ಹೇಳಿದ್ದೀರಿ, ಆ ಭೂಮಿಯಲ್ಲಿ ಮತ್ತೆ ಬೆಳೆ ತೆಗೆಯಬೇಕಾದರೆ ಸುಮಾರು ವರ್ಷಗಳಾಗುತ್ತವೆ, ಆ ವರ್ಷಗಳವರೆಗೆ ಪರಿಶಿಷ್ಟ ಪಂಗಡದವರ ಉಪಜೀವನ ಹೇಗೆ ನಡೆಯಬೇಕು. ಎಂದು ಅದನ್ನು ಕೂಡ ತಾವು ಯೋಜನೆ ಮಾಡಬೇಕಾಗಿದೆ. ಏಕೆಂದರೆ, ಇಲ್ಲಿಂದ ಅವರನ್ನು ಸ್ಥಳಾಂತರ ಮಾಡುತ್ತಿದ್ದೀರಾ, ಇಂಥ ಸಂದರ್ಭದಲ್ಲಿ ಅವರು ಆ ಜಮೀನಿನಲ್ಲಿ ಬೆಳೆ ತೆಗೆದು ಜೀವನ ಸಾಗಿಸಬೇಕಾದರೆ ಕನಿಷ್ಟ ಎಂಟು, ಹತ್ತು ವರ್ಷಗಳು ಬೇಕು. ಆ ಎಂಟು ಹತ್ತು ವರ್ಷಗಳವರೆಗೆ ಅವರು ಜೀವನ ಸಾಗಿಸಬೇಕಾದರೆ ಸರ್ಕಾರದವರು ಅವರಿಗೆ ಏನಾದರೂ ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ನಾನು ಅಧ್ಯಕ್ಷರ ಮೂಲಕ ಸರ್ಕಾರವನ್ನು ಒತ್ತಾಯಮಾಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : (ಅರಣ್ಯ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಚಂದ್ರಶೇಖರ್ ನಾಯಕ್ ಅವರು ಒಂದು ಪ್ರಶ್ನೆಯನ್ನು ಕೇಳಿದ್ದರು ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಅಲ್ಲದೆ ಮಾನ್ಯ ಸದಸ್ಯರಾದ ಬಸವರಾಜ ಕೂಡ ಕೆಲಸ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಸರ್ಕಾರಕ್ಕೆ ಪರಿಶಿಷ್ಟ ಜಾತಿ ಅಥವಾ ಬೇರೆ ಜಾತಿಯವರಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶ ಇಲ್ಲ. ಈ ವಿಚಾರದಲ್ಲಿ 1978ಕ್ಕಿಂತ ಮುಂಚೆ ಯಾವ ಜಮೀನು ಅವರ ವಶದಲ್ಲಿ ಇತ್ತು ಅಂಥ ಜಮೀನುಗಳ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಬರೆದು ಕಳುಹಿಸಿದ್ದೇವೆ. ಅದರಲ್ಲಿ 17 ಹೆಕ್ಟೇರ್ ಬಗ್ಗೆ ನಾವು ಕಳುಹಿಸಿದ್ದೇವು. ಕೇಂದ್ರ ಸರ್ಕಾರದ ತಂಡದವರು ಇಲ್ಲಿಗೆ ಬಂದು ಅದನ್ನು 14 ಸಾವಿರ ಹೆಕ್ಟೇರ್ ಎಂದು ಮಾಡಿದರು. ಆ ಮಂಜೂರಾದ 14 ಸಾವಿರ ಹೆಕ್ಟೇರ್‌ನ್ನು ಈ ಬಡವರಿಗೆ ಕೊಡಬೇಕೆಂದು ಉದ್ದೇಶ ಮಾಡಿದ್ದೇವೆ. ತೀರ್ಮಾನ ಕೂಡ ಆಗಿದೆ. ಈ 14 ಸಾವಿರ ಹೆಕ್ಟೇರ್‌ನಲ್ಲಿ ದಾಳಿಗೊಳಗಾದವರು ಬರುವುದಿಲ್ಲ. ನಾಲ್ಕು ಜನ ಮಾತ್ರ ಬರುತ್ತಾರೆ. ಆ ನಾಲ್ಕು ಜನರು ಯಾರು ಎಂದರೆ ಚನ್ನಪ್ಪಗೌಡ ನಾಲ್ಕು ಎಕರೆ ಮಾಡಿದ್ದಾರೆ. ಇತರೆ ಗಸ್ತೆ ಮತ್ತು ಇನ್ನಿತರರು ಜಮೀನು ಮಾಡಿದ್ದಾರೆ ಈ ಪ್ರಕಾರ ಒಟ್ಟು ಆರು ಜನರಿದ್ದಾರೆ. ಕಾನೂನಿನ ಪ್ರಕಾರ ಒಬ್ಬರಿಗೆ 3 ಎಕ್ಕರೆಗಿಂತ ಮೇಲೆ ಕೊಡಬಾರದು ಎಂಬ ಉದ್ದೇಶವಿರುವುದರಿಂದ ಅವರಿಗೆ 18 ಎಕರೆ ಜಮೀನು ಮಾತ್ರ

ಸಿಗುತ್ತದೆ. ಅದರಲ್ಲಿ ಕೆಲವು ಶರತ್ತುಗಳನ್ನು ಹಾಕಿ ಕೇಂದ್ರ ಸರ್ಕಾರದವರು ಜಮೀನನ್ನು ಮಂಜೂರು ಮಾಡಿದ್ದಾರೆ. ಆ ಶರತ್ತುಗಳು ಯಾವವು ಎಂದರೆ, ಯಾವ ಜಮೀನು ಅರಣ್ಯದ ಮಧ್ಯದಲ್ಲಿ ಇದೆ, ಯಾವ ಜಮೀನು ಅಭಯಾರಣ್ಯದಲ್ಲಿ ಇದೆ, ಯಾವ ಜಮೀನು ಇಳಿಜಾರು ಪ್ರದೇಶದಲ್ಲಿದೆ ಅಂಥವುಗಳನ್ನು ಕೊಡಲು ಬರುವುದಿಲ್ಲವೆಂದು ಇದೆ. ನಮ್ಮ ಅಧಿಕಾರಿಗಳು ಈ ಜಮೀನು ಅರಣ್ಯ ಮಧ್ಯದಲ್ಲಿ ಇದೆ ಆದ್ದರಿಂದ ಇದನ್ನು ಕೊಡಲು ಬರುವುದಿಲ್ಲ ಎಂದು ಹೇಳಿದ್ದಾರೆ. ಗಸ್ತಿ ಮತ್ತು ಇತರರು ಸೇರಿ ಒಟ್ಟು 6 ಜನರಾಗುತ್ತಾರೆ. ಅವರಿಗೆ ಅರಣ್ಯ ಮಧ್ಯದಲ್ಲಿ ಬರುವ ಜಮೀನನ್ನು ಕೊಡಲು ಬರುವುದಿಲ್ಲ. ಕೇಂದ್ರ ಸರ್ಕಾರದ ನೀತಿ ಏನು ಇದೆ ಆ ಪ್ರಕಾರ ಅಂಚಿನಲ್ಲಿ ಇರತಕ್ಕಂತಹ ಜಮೀನನ್ನು ಕೊಡಲು ನಾನು ಒಪ್ಪಿದ್ದೇನೆ. ಅಂಚಿನಲ್ಲಿ ಒಳ್ಳೆಯ ಜಮೀನು ಇದ್ದರೆ ಹೇಳಿ ಅದನ್ನು ನಾನು ಕೊಡಲು ಸಿದ್ದನಾಗಿದ್ದೇನೆ. ಅದರ ವ್ಯವಸ್ಥೆ ಮಾಡೋಣ. ಇನ್ನು ಪರಿಹಾರ ಕೊಡಿ ಎಂದು ಏನು ಕೇಳಿದ್ದೀರಿ ಅದನ್ನು ಕೊಡಲು ಬರುವುದಿಲ್ಲ. ಆದರೆ, ನಾನು ಒಂದು ಸಹಾಯವನ್ನು ಮಾತ್ರ ಮಾಡಬಹುದು. ಅವರು ನನ್ನಲ್ಲಿ ಒಂದು ವೈಯಕ್ತಿಕವಾಗಿ ಹೇಳಿದ್ದಾರೆ. ನಾನು ಅಧಿಕಾರಿಗಳಿಗೆ ಒಂದು ಪತ್ರವನ್ನು ಬರೆದಿದ್ದೇನೆ. ಈಗ ಸಧ್ಯಕ್ಕೆ ಎಷ್ಟು ಇದೆ ಅದನ್ನು ಹಾಗೆ ಬಿಡಿ, ಅವರಿಗೆ ಏನು ತೊಂದರೆ ಕೊಡಬೇಡಿ ಎಂದು ತಿಳಿಸಿದ್ದೇನೆ. ಈ ಸದನ ಮುಗಿದ ತಕ್ಷಣ ನಾನು ಸ್ವತಃ ಬಂದು ನೋಡಿ ಯಾವ ರೀತಿಯ ಪರಿಹಾರವನ್ನು ಕೊಡಬೇಕು ಅದನ್ನು ಖಡಾಖಂಡಿತವಾಗಿ ಕೊಡಲು ವ್ಯವಸ್ಥೆಯನ್ನು ಮಾಡುತ್ತೇನೆ.

ಎಚ್.ಡಿ. ಬಸವರಾಜ್ : ಅಭಯಾರಣ್ಯದ ಮಧ್ಯದಲ್ಲಿ ಇದ್ದರೆ ಅಂಥ ಜಮೀನಿಗೆ ಪರಿಹಾರವನ್ನು ಕೊಡಲು ಬರುವುದಿಲ್ಲ ಎಂದು ಮಾನ್ಯ ಸಚಿವರು ಹೇಳುತ್ತಾರೆ. ಇಷ್ಟು ವರ್ಷ ಬದುಕಿದ್ದವರನ್ನು ನಿರಾಶ್ರಿತರನ್ನಾಗಿ ಮಾಡಿದರಲ್ಲ ಇದು ಮಾನವೀಯತ್ತೇನಾ? ಇಷ್ಟು ವರ್ಷ ಅಲ್ಲಿ ಇದ್ದವರನ್ನು ಒಕ್ಕಲೆಬ್ಬಿಸುತ್ತಿದ್ದೀರಿ ನೀವು. ಅಭಯಾರಣ್ಯದಲ್ಲಿ ಮಾಡಲಿಕ್ಕೆ ಬರುವುದಿಲ್ಲ ಎಂದು ಹೇಳುತ್ತೀರಿ. ಈಗ ಅವರು ಎಲ್ಲಿಗೆ ಹೋಗಬೇಕು? ಇವರಿಗೆ ಏನು ಪರ್ಯಾಯ ವ್ಯವಸ್ಥೆ ಮಾಡುತ್ತೀರಾ? ದೇವರಾಜ ಅರಸ್‌ರವರ ಕಾಲದಲ್ಲಿ ಉಳುವವನಿಗೆ ಭೂಮಿ ಎಂದು ಇತ್ತು. ಇವರು 1972ರಿಂದ ಅಲ್ಲೇ ಇದ್ದಾರೆ. ಆ ಬಗ್ಗೆ ಎಲ್ಲಾ ದಾಖಲೆ ಪತ್ರಗಳು ಅವರಲ್ಲಿ ಇವೆ. ಅವರು ಅಲ್ಲಿ ಇದ್ದರು ಎನ್ನುವುದಕ್ಕೆ ಪುರಾವೆಗಳು ಇವೆ. ಇವತ್ತು ಏಕಾಏಕಿ ಅಭಯಾರಣ್ಯ ಮಾಡುತ್ತೇವೆಂದು ಅವರನ್ನು ಒಕ್ಕಲೆಬ್ಬಿಸಿದ್ದೀರಿ ಅವರು ಜೀವನವನ್ನು ಹೇಗೆ ರೂಪಿಸಿಕೊಳ್ಳಬೇಕು. ಅಲ್ಲದೆ ಸರ್ಕಾರದಿಂದ ಪರಿಹಾರ ಕೊಡಲು ಬರುವುದಿಲ್ಲ ಎಂದು ಹೇಳಿದ್ದೀರಿ. ಆದರೆ, ಮಾನವೀಯತೆಯ ದೃಷ್ಟಿಯಿಂದ ಯಾವ ಪರಿಹಾರ ವ್ಯವಸ್ಥೆಯನ್ನು ಮಾಡಬೇಕೋ ಅದನ್ನು ತಾವು ಮಾಡಬೇಕಾಗುತ್ತದೆ. ಅಭಯಾರಣ್ಯದಲ್ಲಿ ತಾವು ಎಷ್ಟು ಎಕರೆ ಜಮೀನನ್ನು ಉಳಿಸಿಕೊಳ್ಳುತ್ತಿದ್ದೀರಿ ಎಷ್ಟು ಎಕರೆ ಜಮೀನನ್ನು ಬೇರೆ ಕಡೆ ಗುರುತು ಮಾಡಿ ಪರ್ಯಾಯವಾಗಿ ಕೊಡಲು ವ್ಯವಸ್ಥೆ ಮಾಡಿದ್ದೀರಿ. ಆ ಜಮೀನಿನಲ್ಲಿ ಎಷ್ಟು ವರ್ಷ ಉಳಿಮೆ ಮಾಡಿದರೂ ಬೆಳೆ ಬರುವುದಿಲ್ಲವೋ ಅಲ್ಲಿಯವರೆಗೆ ಅವರ ಜೀವನ್ನಕ್ಕೆ ಏನಾದರೂ ವ್ಯವಸ್ಥೆ ಮಾಡಿ. ಅವರು ತಮ್ಮ ಜೀವನವನ್ನು ಸುಸೂತ್ರವಾಗಿ ರೂಪಿಸಿಕೊಳ್ಳುವಂಥ ವ್ಯವಸ್ಥೆ ಮಾಡಿ. ಅವರಿಗೆ ಪರಿಹಾರ ಕೊಡಲು ಬರುವುದಿಲ್ಲ ಎಂದು ಹೇಳಿರುವುದರಿಂದ ಅದರ ಬಗ್ಗೆ ಮಾತನಾಡುವುದು ಎನ್ನುವುದು ಬೇಡ. ಎಷ್ಟು ಎಕರೆ ಜಮೀನನ್ನು ವಶಪಡಿಸಿಕೊಳ್ಳತ್ತೀರಿ ಮತ್ತು ಅದರ ಬದಲಾಗಿ ಅವರಿಗೆ ಎಷ್ಟು

ಎಕರೆ ಜಮೀನನ್ನು ಕೊಡುತ್ತಾ ಇದ್ದೀರಿ, ಅದನ್ನು ನಿರ್ದಿಷ್ಟವಾಗಿ ಹೇಳಬೇಕೆಂದು ನಾನು ಸಭಾಧ್ಯಕ್ಷರ ಮೂಲಕ ಸಚಿವರಲ್ಲಿ ಕೇಳುತ್ತೇನೆ.

ಅಧ್ಯಕ್ಷರು : ಈಗ ನಿಜವಾದ ಗಿರಿಜನರು ಎದ್ದಿದಾರೆ.

ಶ್ರೀ ಕಾಗೋಡ ತಿಮ್ಮಪ್ಪ : ಅದು ಸರ್ಕಾರದ ಜಮೀನು. ಆದ್ದರಿಂದ ಅದಕ್ಕೆ ಪರಿಹಾರ ಕೊಡಲು ಬರುವುದಿಲ್ಲ ಎಂದು ಹೇಳಿದ್ದೀರಿ. ವರಾಹಿ ಪ್ರಾಜಕ್ಟ್‌ನಲ್ಲಿ ಬಗೆರ್ ಹುಕ್ಕುಂ ಸಾಗುವಳಿ ಮಾಡಿದಂತಹ ರೈತರಿಗೆ ಪರಿಹಾರ ಕೊಟ್ಟಿದ್ದಾರೆ. ಅಲ್ಲಿ ಪುನರ್‌ವಸತಿ ಯೋಜನೆಯಲ್ಲಿ ಅನುಕೂಲಮಾಡಿ ಕೊಟ್ಟಿದ್ದಾರೆ. ಇಲ್ಲಿ ಕೂಡ ಎಕ್ಸ್‌ಗ್ರೇಷಿಯಾ ಪರಿಹಾರವನ್ನು ತಾವು ಕೊಡಲು ಬರುತ್ತದೆ. ಅವರು ಯಾವ ಆಜ್ಞೆಯನ್ನು ಹೊರಡಿಸಿದರು, ಅದೇ ರೀತಿ ನೀವು ಅರಣ್ಯ ಇಲಾಖೆಯಿಂದ ಹೊರಡಿಸಿದರೆ, ನಿಯಮಾವಳಿ ಪ್ರಕಾರ ಪರಿಹಾರ ಕೊಡಲು ಬರುತ್ತದೆ.

ಶ್ರೀ ಸಿ.ಎಚ್. ವಿಜಯಶಂಕರ್ : ನನ್ನದು ಒಂದು ವಿಚಾರ, ಅದಕ್ಕೆ ಸಚಿವರು ಉತ್ತರ ಹೇಳಬೇಕು. ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡುವಂಥಹ ಸಮಯದಲ್ಲಿ ಅನೇಕ ವಿಚಾರಗಳನ್ನು ಸ್ಪಷ್ಟಪಡಿಸಿದ್ದಾರೆ. ಆದರೂ ನಮ್ಮ ಮನಸ್ಸಿನಲ್ಲಿ ಕೆಲವೊಂದು ಶಂಕೆಗಳು ಇವೆ. 1978ಕ್ಕಿಂತ ಮೊದಲು ಯಾರು ಅರಣ್ಯಭೂಮಿಯನ್ನು ಬಿತ್ತಿ ಬೇಸಾಯ ಮಾಡುತ್ತಿದ್ದರು ಅಂಥವರ ದಾಖಲೆಯನ್ನು ಸಿದ್ಧಮಾಡಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ. ಆದರೆ 1978ಕ್ಕಿಂತ ಮುಂಚೆ ಇವರು ವ್ಯವಸಾಯ ಮಾಡುತ್ತಿದ್ದರು ಎಂದು ಹೇಳಿ ರಾಜ್ಯ ಸರ್ಕಾರ ದಾಖಲೆ ಮಾಡುವಾಗ, ಯಾರ ಮೂಲಕ ಮಾಹಿತಿಯನ್ನು ಸಂಗ್ರಹ ಮಾಡಿದ್ದಾರೆ. ಕಂದಾಯ ಇಲಾಖೆಯವರನ್ನು ಕೇಳಿದ್ದೀರಾ? ಸ್ಥಳೀಯ ಪ್ರತಿನಿಧಿಗಳನ್ನು ಕೇಳಿದ್ದೀರಾ? ಸ್ಥಳೀಯ ಶಾಸಕರನ್ನು ಕೇಳಿದ್ದೀರಾ? ಯಾರು ರಾಜ್ಯಸರ್ಕಾರಕ್ಕೆ ವರದಿ ಮಾಡಿದ್ದರು, ಯಾವಾಗ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ವರದಿ ಮಾಡಿದ್ದರು ಎಂದು ಇವತ್ತಿನವರೆಗೆ ಗೊತ್ತಿಲ್ಲಾ. ಏಕೆಂದರೆ ನಾನು ನನ್ನ ಕ್ಷೇತ್ರದಲ್ಲಿ ದರ್‌ಖಾಸ್ತು ಸಮಿತಿಯ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೇನೆ. ಕಳೆದ30,40 ವರ್ಷಗಳಿಂದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಂತಹ, ಕಾಡಿಗೂ, ಜಮೀನಿಗೂ ಸಂಬಂಧ ಇಲ್ಲದಂತಹ ಮತ್ತು ಅದೇ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿರತಕ್ಕಂತಹ ರೈತರನ್ನು ಕೂಡ ಅರಣ್ಯ ಇಲಾಖೆಯವರು ದಾಖಲೆಗಳಲ್ಲಿ ಕಾಣಿಸಿದ್ದಾರೆ. ಇವತ್ತು ಅದನ್ನು ಮಂಜೂರಾತಿ ಮಾಡಲು ಬರುವುದಿಲ್ಲ ಎನ್ನುವಂತಹ ವ್ಯವಸ್ಥೆಯನ್ನು ನನ್ನ ಕಣ್ಣಿನಿಂದ ನೋಡುತ್ತಿದ್ದೇನೆ. ಈ ಪರಿಸ್ಥಿತಿ ಅನೇಕ ಕಡೆ ಇರುವಂತಹ ಸಂದರ್ಭದಲ್ಲಿ ಅಧಿಕಾರಿಗಳು ಸರ್ಕಾರಕ್ಕೆ ಲೆಕ್ಕಾಚಾರ ಕೊಡುವಂಥ ವಿಚಾರದಲ್ಲಿ ತಪ್ಪಿರುವುದರಿಂದ, ಕಳಿದ ಅನೇಕ ವರ್ಷಗಳಿಂದ ಆ ಜಮೀನನ್ನು ಉಳುಮೆ ಮಾಡುತ್ತಿರುವುದರಿಂದ, ಅದು ಹಳೆಯ ಕಾಲದ ಅರಣ್ಯ ಇಲಾಖೆಯ ದಾಖಲೆಯಲ್ಲಿ ಕಂಡು ಬಂದ ಸಂದರ್ಭ ಇರುವುದರಿಂದ ಅಂಥವನ್ನು ತಾವು ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಬೇಕಾಗುತ್ತದೆ, ಅಥವಾ ಸ್ಥಳೀಯ ಜನರ ಪ್ರತಿನಿಧಿಗಳಿಂದ ಮಾಹಿತಿ ಪಡೆದು ಆ ರೈತರಿಗೆ ರಕ್ಷಣೆ ಕೊಡುವಂಥಹ ಕೆಲಸವನ್ನು ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ತಾವು ಏನು ಮಾಡುತ್ತೀರೆಂದು ನಾನು ತಮ್ಮಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಚಂದ್ರಶೇಖರ್ ನಾಯಕ್ : ಅಧ್ಯಕ್ಷರೆ, ನಾವು ಕೇಳಬಾರದು ಎಂದರೆ ಹೇಗೆ? ಕೇಳ -ಬಾರದೆಂದರೆ ಕೇಳುವುದನ್ನು ಬಿಟ್ಟುಬಿಡುತ್ತೇವೆ, ನಮಗೆ ಸಂಶಯ ಬಂದರೆ ನಾವು ಕೇಳಬೇಕಾಗುತ್ತದೆ. ಅದು ರಸ್ತೆ ಬದಿಗೆ ಇಲ್ಲ ಅದು ಅರಣ್ಯ ಮಧ್ಯದಲ್ಲಿದೆ ಎಂದು ಹೇಳಿದ್ದಾರೆ. ರಸ್ತೆ ಬದಿಗೆ ಎಂದರೆ ಅದು ಒಂದು ಫರ್ಲಾಂಗ್ ಕೂಡ ಇಲ್ಲ, ಮಾರುತಿ ಕಾರುಹೋಗುತ್ತದೆ. ಗೋಕಾಕ್‌ನಿಂದ ಬೆಳಗಾಂಗೆ ಬಸ್‌ಗಳು ಹೋಗುತ್ತವೆ, ಆ ಬಸ್ಸಿನ ರಸ್ತೆಗೆ ಅಡಚಣೆಯಾಗುತ್ತಿದೆ. ರಸ್ತೆ ಮಧ್ಯದಲ್ಲಿರುವ ಜಮೀನು ಎಷ್ಟರಲ್ಲಿದೆ ಎಂದರೆ ಒಂದು ಕಿ.ಮೀ. ಅಂತರದಲ್ಲಿದೆ. ಅಲ್ಲಿ ಅರಣ್ಯ ಇಲಾಖೆಗೆ ಸೇರಿದಂಥ ನೂರು ಎಕರೆ ಜಮೀನು ಇದೆ, ಫಾರೆಸ್ಟರ್, ಅವನು ಅಲ್ಲೇ ಕೆಲಸ ಮಾಡುತ್ತಿದ್ದಾನೆ. ಅವನು ಬುಲ್ಡೋಜರ್ ತೆಗೆದುಕೊಂಡು ಈ ರೈತರ ಜಮೀನಿನ ಬೆಳೆಯನ್ನು ನಾಶ ಮಾಡುತ್ತಾನೆ. ಆದರೆ ಅವನ ಹೊಲಕ್ಕೆ ಇವರೇನು ಕೈಹಾಕಲಿಲ್ಲ. ಇನ್ನೊಂದು ವಿಷಯ, 1978ರ ಪೂರ್ವದಿಂದಲೂ ಮಾಡಿಕೊಂಡು ಬರುತ್ತಿದ್ದಾರೆನ್ನುವ ಮಾತು ಸಿದ್ಧವಾಯಿತು. ಏಕೆಂದರೆ ನೀವು ಅವರಿಗೆ ಬೇರೆ ಕಡೆ ಜಮೀನು ಕೊಡುತ್ತೇವೆಂದು ಹೇಳಿದಾಗ ಅವರು ಅದಕ್ಕೆ ಅರ್ಹರಾದರು. ಅಂದಾಗ ಅಲ್ಲಿ ಅನಧಿಕೃತವಾದ ಜಮೀನಿನಲ್ಲಿ ಎಷ್ಟೋ ಬೆಳೆಯನ್ನು ಬೆಳೆಯುತ್ತಿದ್ದಾರೆ, ಮಾವಿನ ಗಿಡವನ್ನೆಲ್ಲಾ ನೆಟ್ಟು ಬೆಳೆಯುತ್ತಿದ್ದಾರೆ. ಈಗ ಸಾಗುವಳಿ ಮಾಡುತ್ತಿರುವವರಿಗೆ ನೀವು ಏನು ಮಾಡಲಿಲ್ಲ. ಈ ರೈತರಿಗೆ ಮುದ್ದಾಂ ಏತಕ್ಕೆ ಆಯಿತು ಎಂದರೆ, ಅಂತರಿಕವಾಗಿ ಏನು ನಡೆದಿದೆ ಎನ್ನುವ ಕೆಲವು ವಿಚಾರಗಳನ್ನು ನಾನು ಮಾತನಾಡಿದ್ದೇನೆ. ಅದಕ್ಕೆ ತಾವು ಅಧಿಕಾರಿಗಳ ಮಾತಿಗೆ ಬೆಲೆ ಕೊಡಲಾರದೆ, ಅಲ್ಲಿರತಕ್ಕಂಥ ವಾಸ್ತವಾಂಶವನ್ನು ಅರಿತುಕೊಳ್ಳಿ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಅಲ್ಲಿ ಏನು ನಡೆದಿದೆ ಗುರುಪಾದಪ್ಪ ನಾಗಮಾರಪಲ್ಲಿಯವರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಅವರು ಹೇಳುವುದಕ್ಕೆ ಹೆದರುತ್ತಿದ್ದಾರೆ. ಏಕೆಂದರೆ ಈಗ ಫಾರೆಸ್ಟ್ ಜಮೀನನ್ನು ಹೊಡೆದಂಥವರಿಗೆ ಇವರು ಎವಿಕ್ಟ್ ಮಾಡುತ್ತಿದ್ದಾರೆ ಅವರು ಬಡವರು ಇದ್ದಾರೆ. ಅದಕ್ಕೆ ಬಡವರಿಗೆ ಇದನ್ನು ಮಾಡಿದರು, ಯಾರು ಅಧಿಕಾರಿಗಳಿದ್ದರು, ಶ್ರೀಮಂತರು ಇದ್ದರು ಅವರು ಅಲ್ಲೇ ಇದ್ದಾರೆ, ಅವರಿಗೇನು ಮಾಡುತ್ತಿಲ್ಲ. ಅದಕ್ಕೆ ಎಲ್ಲರೊಡನೆ ಒಳಗುಟ್ಟಾಗಿ ಮಾತನಾಡಿದ್ದೇನೆ, ಅದಕ್ಕೆ ಕೊನೆಯಪಕ್ಷ ಇವರನ್ನು ಅಲ್ಲೇ ಇಟ್ಟುಕೊಳ್ಳಿ ಎಂದು ಕೇಳಿಕೊಂಡಿದ್ದೇವೆಂದು ಅವರು ಹೇಳಿದರು.

ಶ್ರೀ. ಚಂದ್ರಶೇಖರ್ ನಾಯಕ್ : ಅವರು ಈಗ ಅಲ್ಲಿರತಕ್ಕಂಥ ಜಮೀನನ್ನು ವಶಪಡಿಸಿ ಕೊಳ್ಳುವಂಥ ಕ್ರಮ ಏನೆಂದರೆ, ಬಂದೂಕು ತೆಗೆದುಕೊಂಡು ನಿಮ್ಮ ಮೇಲೆ ಗುಂಡು ಹಾರಿಸುತ್ತೇನೆ, ಆ ಹೆಣ್ಣುಮಕ್ಕಳಿಗೆ ಅವಾಚ್ಯ ಶಬ್ಧಗಳಿಂದ ಬೈಯುವುದು, ಈ ಅಧಿಕಾರವೇತಕ್ಕೆ? ನಮ್ಮನ್ನೆಲ್ಲಾ ಕರೆದು, ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತಿಯ ಸದಸ್ಯರನ್ನೆಲ್ಲಾ ಕರೆದು ಸಹಕಾರ ತೆಗೆದುಕೊಂಡು ಮಾಡಿದ್ದಾರೆ ಈ ಘಟನೆಯಾಗುತ್ತಿರಲಿಲ್ಲ. ಇಲ್ಲವೆಂದರೆ, ಅಲ್ಲಿ ಜೀವಹಾನಿಯಾಗುವಂಥ ಪ್ರಸಂಗವಿದೆ. ನಾವು, ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು, ಸದಸ್ಯರೆಲ್ಲಾ ಹೋಗಿ ಅದನ್ನು ಶಾಂತರೀತಿಯಿಂದ ಬಗೆಹರಿಸಿ, ಎಲ್ಲಾ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲರನ್ನು ಒಂದು ಕಡೆಗೆ ಕರೆದುಕೊಂಡು ಬಂದು ಮೂರುದಿವಸ ಇಟ್ಟುಕೊಂಡೆ. ಆರುನೂರು ಜನರಿಗೆ ನಮ್ಮಲ್ಲಿ ಅನ್ನಛತ್ರದ ರೀತಿ ಅವರಿಗೆಲ್ಲಾ ಊಟ ಹಾಕಿ ಅವರನ್ನು ಸಮಾಧಾನಮಾಡಿ ಕಳುಹಿಸಬೇಕಾದರೆ ನಮಗೆ ಸಾಕಾಯಿತು.

ಅಧ್ಯಕ್ಷರು : ಸಮಸ್ಯೆ ಏನೆಂದು ಅರ್ಥವಾಯಿತು ಮಂತ್ರಿಗಳು ಉತ್ತರವನ್ನು ಕೊಡಲಿ.

ಶ್ರೀ. ಕೆ.ಎಸ್. ಪುಟ್ಟಣ್ಣಯ್ಯ : ಈ ರೀತಿ ಇಡೀ ರಾಜ್ಯದ ತುಂಬಾ ಅರಣ್ಯ ಜಮೀನನ್ನು ಉಳುಮೆ ಮಾಡಿರತಕ್ಕಂಥ ರೈತರ ಪರಿಸ್ಥಿತಿ ಕಾಡುತ್ತಿದೆ. ಖಾನಾಪುರ ಸೇರಿದಂತೆ ಎಲ್ಲಾ ಕಡೆ ಒಕ್ಕಲೆಬ್ಬಿಸುವಂಥ ಕೆಲಸವಾಗಿದೆ, ಬಣವೆಗೆಲ್ಲ ಬೆಂಕಿ ಇಟ್ಟು ಗಲಾಟೆಯಾಗಿದೆ. ಸುಮಾರು ಇಪ್ಪತ್ತೈದು, ಮೂವತ್ತು ವರ್ಷಗಳಿಂದ ಬಗರ್ ಹುಕ್ಕುಂ ಸಾಗುವಳಿ ಮಾಡುತ್ತಿದ್ದಾರೆ. ಕನಿಷ್ಟ ನಾನು ಹೇಳುವುದೇನೆಂದರೆ, ತಾವು ಆ ಜಮೀನನ್ನು ಬಿಡಿಸಿಕೊಂಡು ಏನು ಮಾಡುತ್ತೀರಿ ಎಂದರೆ ಅರಣ್ಯವನ್ನು ಬೆಳೆಸುತ್ತೀರಿ. ಆ ಅರಣ್ಯ ಬೆಳೆಸುವುದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಈಗ ಆ ರೈತರು ಏನು ಜಮೀನು ಸಾಗುವಳಿ ಮಾಡುತ್ತಿದ್ದಾರೆ ಅದರಲ್ಲೇ ಅರಣ್ಯವನ್ನು ಬೆಳೆಸತಕ್ಕಂಥ ಕೆಲಸವನ್ನು ನೀವು ಮಾಡಿಸಿ, ಅವರಿಗೆ ನೀವೇನು ಖರ್ಚು ಮಾಡುತ್ತೀರಿ ಆ ಹಣವನ್ನು ಕೊಟ್ಟರೆ ಸಾಮಾಜಿಕವಾಗಿ, ಉತ್ತಮವಾಗಿ ಇವತ್ತು ತಾವೇನು ಅರಣ್ಯ ಇಲಾಖೆಯವರು ಖರ್ಚು ಮಾಡುತ್ತೀರಿ ಅದಕ್ಕಿಂತ ಉತ್ತಮವಾಗಿ ಅವರು ಅರಣ್ಯವನ್ನು ಬೆಳೆದುಕೊಡುತ್ತಾರೆ. ಅರಣ್ಯದಲ್ಲಿ ಬೆಳೆದಂಥ ಅಂಶದಲ್ಲಿ ಸರ್ಕಾರಕ್ಕೆ ಇಷ್ಟು ತಾವಿಷ್ಟು ಇಟ್ಟುಕೊಂಡು ಬದುಕತಕ್ಕಂಥ ಒಂದು ಯೋಚನೆಯನ್ನು ಈ ಸರ್ಕಾರ ಮಾಡಿದರೆ ಈ ಸಮಸ್ಯೆಯನ್ನು ಬಗೆಹರಿಸಬಹುದು. ಲಕ್ಷಾಂತರ ರೂಪಾಯಿಗಳ ಹಣವನ್ನು ಖರ್ಚು ಮಾಡಿ ಗಿಡವನ್ನು ಬೆಳೆಸಿ, ಗಿಡಗಳನ್ನು ನೆಡದೆಯೇ ಬಹಳ ನಷ್ಟವನ್ನು ಅನುಭವಿಸುತ್ತಿದ್ದೇವೆ. ಅಂಥದ್ದರಲ್ಲಿ ಇವತ್ತು ಶೇಕಡ 9-11ರಷ್ಟು ಕಾಡಿದೆ. ಆ ರೈತರನ್ನು ಇದರಲ್ಲಿ ತೊಡಗಿಸಿಕೊಳ್ಳತಕ್ಕಂಥ ಒಂದು ಯೋಜನೆ, ಬಗ್ಗೆ ಯೋಚನೆಯನ್ನು ಸರ್ಕಾರ ಮಾಡಿದರೆ ಈ ಸಮಸ್ಯೆಯನ್ನು ಬಗೆಹರಿಸಬಹುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೆ, ಈಗ ಸದಸ್ಯರಾದ ಚಂದ್ರಶೇಖರ್ ನಾಯಕ್‌ರವರು ಹೇಳಿದ ಪ್ರಕಾರ, ನಾನು ಮೊದಲೇ ಹೇಳಿದೆ, ನನ್ನ ಹತ್ತಿರ ಉತ್ತರ ಬಂದಿದೆ, ಅದರಲ್ಲಿ ಇದು ಅರಣ್ಯದ ಮಧ್ಯದಲ್ಲಿದೆ ಎಂದಿದೆ, ಅವರು ಅಂಚಿನಲ್ಲಿದೆ ಎಂದು ಹೇಳಿದರು. ಅದು ಅಂಚಿನಲ್ಲಿದೆ ಎಂದರೆ ನಾನು ಸ್ವತಃ ಬರುತ್ತೇನೆ, ಅದು ಅಂಚಿನಲ್ಲಿದ್ದರೆ, ಅದಕ್ಕೆ ಪರಿಹಾರ ಕೊಡುತ್ತೇನೆ. ಬಗೆಹರಿಸುತ್ತೇನೆ ಎಂದು ಹೇಳುತ್ತಿದ್ದೇನೆ. ನಾನು ಏತಕ್ಕೆ ಸ್ವತಃ ಬರುತ್ತೇನೆಂದು ಹೇಳಿದೆ ಎಂದರೆ ಸದಸ್ಯರು ಹೇಳುವ ಪ್ರಕಾರ ಅದು ಅಂಚಿನಲ್ಲಿದೆ, ಆದರೆ ನನಗೆ ವರದಿ ಬಂದಿರುವ ಪ್ರಕಾರ ಅದು ಅರಣ್ಯ ಮಧ್ಯದಲ್ಲಿದೆ ಎಂದಿದೆ. ಆಮೇಲೆ ಸದಸ್ಯರಾದ ಬಸವರಾಜು ಹಾಗೂ ಇತರೆ ಸದಸ್ಯರು ಏನು ಹೇಳಿದ್ದಾರೆ ಅದು ಬೇರೆ ವಿಚಾರ. ಯಾವುದು ಪುನರ್ವಸತಿ ಕೆಲಸ ಮಾಡಬೇಕು ಅದನ್ನು ಬಹಳ ಒಳ್ಳೆಯ ರೀತಿಯಲ್ಲಿ ಮಾಡಿಕೊಡುತ್ತೇವೆ. ಯಾರು ಜಮೀನು ಕಳೆದುಕೊಂಡಿದ್ದಾರೆ, ಬದಲಾಗಿ ಬೇರೆ ಕಡೆ ಅವರಿಗೆ ಜಮೀನನ್ನು ಕೊಟ್ಟು ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡುವಂಥ ವ್ಯವಸ್ಥೆಯನ್ನು ಸರ್ಕಾರ ತೀರ್ಮಾನ ಮಾಡಿದೆ, ಅದನ್ನು ಮಾಡಿಕೊಡುತ್ತೇವೆ. ನಿಮ್ಮ ಸಲುವಾಗಿ ನಾನು ಮಾತನಾಡಿದ್ದೇನೆ. ಈ ಪ್ರಕಾರ ಪುನರ್ವಸತಿಯನ್ನು ಬಹಳ ಒಳ್ಳೆಯ ರೀತಿಯಲ್ಲಿ ಮಾಡುವುದಿದೆ. ನಂಬಿಕೆ ಹೋಗಿದೆ, ಹೊರಗೆ ಹೋಗಿ ಎಂದು ಹೇಳಿದರೆ ಯಾರು ರೈತರು ಹೋಗುತ್ತಿಲ್ಲ, ಎತ್ತಂಗಡಿ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಮಾನ್ಯ ಸಭಾಧ್ಯಕ್ಷರೆ, ಎತ್ತಂಗಡಿ ಮಾಡುತ್ತಿಲ್ಲ, ಅವರಿಗೆ

ಪುನರ್ವಸತಿ ಮಾಡಿಕೊಡುತ್ತೇವೆ. ಆ ಉದ್ದೇಶದಿಂದ ಬಹಳ ಒಳ್ಳೆಯ ರೀತಿಯಲ್ಲಿ ಪುನರ್ವಸತಿ ಮಾಡಿಕೊಡುತ್ತೇವೆ, ಸುಸಜ್ಜಿತವಾಗಿ ಮಾಡಿ ಕೊಡುತ್ತೇವೆ, ಜಮೀನನ್ನು ಕೂಡ ಅಂಚಿನಲ್ಲಿ ಕೊಡುತ್ತೇವೆ, ಇಷ್ಟು ಮಾತ್ರ ಆಶ್ವಾಸನೆಯನ್ನು ಕೊಡುತ್ತೇನೆ. ಇನ್ನು ಪರಿಹಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಪರಿಹಾರ ಕೊಡುವುದು ನಮ್ಮ ಕಾಯಿದೆಯಲ್ಲಿ ಇನ್ನು ಯಾವುದು ಇಲ್ಲ. ಅಂಥದ್ದು ಏನಾದರೂ ಇದ್ದರೆ ಪರಿಶೀಲಿಸಿ ನೋಡುತ್ತೇನೆ, ಸಧ್ಯಕ್ಕೆ ಅರಣ್ಯ ಜಮೀನಿಗೆ ಪರಿಹಾರ ಕೊಡಲು ಯಾವ ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಅಂಥದ್ದು ಏನೂ ನನ್ನ ಗಮನಕ್ಕೆ ಬಂದಿಲ್ಲ, ಅಂಥದ್ದು ಏನಾದರೂ ಗಮನಕ್ಕೆ ಬಂದರೆ ನೋಡುತ್ತೇನೆ ಸ್ವಾಮಿ, ಸಧ್ಯಕ್ಕೆ ಅಂಥದ್ದು ಯಾವುದು ನನ್ನ ಗಮನಕ್ಕೆ ಬಂದಿಲ್ಲ, ಒಂದು ವೇಳೆ ಅಂಥದ್ದು ಇದ್ದರೆ ನಾನು ನೋಡುತ್ತೇನೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ನಾನು ಹೇಳಿದ್ದುದು, 1978ಕ್ಕಿಂತ ಮೊದಲು ಯಾರು ಅರಣ್ಯ ಜಮೀನು ಸಾಗುವಳಿ ಮಾಡಿದ್ದಾರೆ, ಅಂಥವರಿಗೆ ಅದನ್ನೇ ಖಾಯಂ ಮಾಡಿಕೊಡುವ ಸಲುವಾಗಿ ರಾಜ್ಯ ಸರ್ಕಾರ ಒಂದು ವರದಿಯನ್ನು ತಯಾರು ಮಾಡಿದೆ. ಆ ವರದಿಯನ್ನು ತಯಾರು ಮಾಡುವಂಥ ಸಮಯದಲ್ಲಿ 1978 ಅಲ್ಲ ಕಳೆದು ಮೂವತ್ತು ನಲವತ್ತು ವರ್ಷಗಳಿಂದ ವ್ಯವಸಾಯ ಮಾಡುತ್ತಿರುವಂಥವರನ್ನು ಕೈಬಿಟ್ಟಿದ್ದಾರೆ. ಏಕೆಂದರೆ ಈ ಪಟ್ಟಿಯನ್ನು ತಯಾರು ಮಾಡುವಂಥ ಸಮಯದಲ್ಲಿ ಕಂದಾಯ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ, ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ, ಇತರೆ ಇಲಾಖೆಯ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ,. ಅರಣ್ಯ ಇಲಾಖೆಯ ಅಧಿಕಾರಿಗಳು ಗುಟ್ಟಾಗಿ ಈ ವರದಿಯನ್ನು ತಯಾರು ಮಾಡಿದ್ದಾರೆ. ಇಂಥ ಸಂದರ್ಭದಲ್ಲಿ ನ್ಯಾಯಯುತವಾಗಿರುವ ಅನೇಕ ರೈತರ ಹೆಸರುಗಳು ಈ ಪಟ್ಟಿಯಲ್ಲಿ ಬಿಟ್ಟುಹೋಗಿದೆ. ಅಂಥ ರೈತರ ಪರವಾಗಿ ತಾವು ಏನು ಮಾಡುತ್ತೀರೆನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೇನೆ; ಅದಕ್ಕೆ ಉತ್ತರ ಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ : 27-4-1978 ರಲ್ಲಿ ಇದನ್ನು ಸರ್ವೇ ಮಾಡಿದ್ದಾರೆ. ಇದನ್ನು ಅರಣ್ಯ ಇಲಾಖೆ ಅಧಿಕಾರಿಗಳು, ಕಂದಾಯ ಇಲಾಖೆಯ ಅಧಿಕಾರಿಗಳು ಇಬ್ಬರೂ ಕೂಡಿ ಮಾಡಿದ್ದಾರೆ. ಇದನ್ನು ಮಾಡಿದ ಮೇಲೆ ಹದಿನೇಳು ಸಾವಿರ ಹೆಕ್ಟೇರ್ ಅನ್ನು ನಾವು ಕಳುಹಿಸಿದ್ದೇವೆ. ಅದು ಸರಿಯಿಲ್ಲವೆಂದು ಪುನಃ ಕೇಂದ್ರದ ತಂಡ ಬಂದು ಅವರೇ ಜಾಗಕ್ಕೆ ಹೋಗಿ ನೋಡಿಕೊಂಡು ಸರ್ವೇ ಮಾಡಿ ಹದಿನಾಲ್ಕು ಸಾವಿರ ಹೆಕ್ಟೇರ್‌ಗೆ ಇಳಿಸಿದ್ದಾರೆ. ಆದುದರಿಂದ, ಇದನ್ನು ಯಾರು ನೋಡಿಲ್ಲವೆಂತಲ್ಲ, ಎಲ್ಲರು ನೋಡಿದ್ದಾರೆ. ಅವರು ಕೂಡ ಸೇರಿಯೇ ಇದನ್ನು ಮಾಡಿದ್ದಾರೆ. ಆದರೆ ಅವರು ನಿಬಂಧನೆ ಏನು ಹಾಕಿದ್ದಾರೆಂದರೆ ಅರಣ್ಯದ ಮಧ್ಯದಲ್ಲಿರುವ ಜಮೀನನ್ನು ಕೊಡುವುದಕ್ಕಾಗುವುದಿಲ್ಲ, ಅಂಚಿನಲ್ಲಿರುವುದನ್ನು ಕೊಡಬೇಕೆನ್ನುವುದು. ನಮ್ಮ ಸರ್ಕಾರ ಬಂದ ಮೇಲೆ ಹದಿನಾಲ್ಕು ಸಾವಿರ ಹೆಕ್ಟೇರ್‌ಅನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಇದು ಸಚಿವ ಸಂಪುಟದಲ್ಲೂ ತೀರ್ಮಾನವಾಗಿದೆ, ಅದನ್ನು ಬಿಟ್ಟು ಯಾವುದಾದರೂ ಜಮೀನು ಇದ್ದರೆ ಅಂಥವನ್ನು ಖಾಲಿ ಮಾಡಿಸುತ್ತಿದ್ದೇವೆ. ಈ ಬಗ್ಗೆ ಸರ್ಕ್ಯೂಲರ್ ಕಳುಹಿಸಿದ್ದೇವೆ.

ಶ್ರೀ. ಕಾಗೋಡು ತಿಮ್ಮಪ್ಪ : ಅದನ್ನು ಯಾವಾಗ ಕಳುಹಿಸಿದ್ದೀರಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಯಾರ್ಯಾರು ಅವರ ಜಮೀನನ್ನು ಉಳುತ್ತಾರೆ ಅಂಥವರದ್ದನ್ನು ಖಾಯಂ ಗೊಳಿಸುವ ಸಲುವಾಗಿ ಒಟ್ಟು ಹದಿನಾಲ್ಕು ಸಾವಿರ ಹೆಕ್ಟೇರ್‌ಗೆ ಸಂಬಂಧಿಸಿದಂತೆ ಸರ್ಕ್ಯುಲರ್ ಹೊರಡಿಸಿದ್ದೇವೆ.

ಶ್ರೀ. ಕಾಗೋಡು ತಿಮ್ಮಪ್ಪ : ತಾಲ್ಲೂಕು ಮಟ್ಟದ ಸಮಿತಿ ಇದೆ. ಅದಕ್ಕೆ ಎ.ಸಿ. ಅಧ್ಯಕ್ಷರು, ಸ್ಥಳೀಯ ಶಾಸಕರು ಮತ್ತು ನಾಮನಿರ್ದೇಶನ ಮಾಡಿರುವಂಥ ಖಾಸಗಿ ಒಬ್ಬ ಸದಸ್ಯರು, ಒಬ್ಬ ಎಸ್ಸಿಯವರು ಅದರಲ್ಲಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ದಿನಾಂಕ 5-6-1997 ರಲ್ಲಿ ನಾವು ಸಂಬಂಧಿಸಿದ ಎಲ್ಲರಿಗೂ ಸರ್ಕ್ಯೂಲರ್ ಕಳುಹಿಸಿದ್ದೇವೆ. ಯಾರು ಜಮೀನು ಅವರ ಪೊಸಿಷನ್‌ನಲ್ಲಿತ್ತು ಅಂಥ ಹದಿನಾರು ಸಾವಿರ ಹೆಕ್ಟೇರ್ ಜಮೀನನ್ನು ಖಾಯಂಗೊಳಿಸುವುದಕ್ಕೆ ಕಳುಹಿಸಿದ್ದೇವೆ ಎಲ್ಲಾ ಜಿಲ್ಲೆಗಳಿಗೂ ಸರ್ಕ್ಯುಲರ್ ಕಳುಹಿಸಲಾಗಿದೆ, ಎಲ್ಲಾ ಜಿಲ್ಲೆಗಳ ಪಟ್ಟಿಯನ್ನು ಕೊಡಬೇಕೆಂದು ಹೇಳಿದರೆ ನಾನು ಪ್ರತ್ಯೇಕವಾಗಿ ಕೊಡುತ್ತೇನೆ.

ಶ್ರೀ . ಕಾಗೋಡು ತಿಮ್ಮಪ್ಪ : ಸ್ವಾಮಿ, ಅದೇ ಪಟ್ಟಿ ಮಾಡುವ ಸಲುವಾಗಿ ಸರ್ಕಾರದ ಒಂದು ಆಜ್ಞೆಯಿದೆ. ಆ ತಾಲ್ಲೂಕುಮಟ್ಟದ ಸಮಿತಿಯವರು ಸೇರಿ ಪಟ್ಟಿಯನ್ನು ಮಾಡಿ ಸರ್ಕಾರಕ್ಕೆ ಕಳುಹಿಸಬೇಕು, ಆ ಕೆಲಸವಾಗಿಲ್ಲ.

ಶ್ರೀ. ಗುರುಪಾದಪ್ಪ ನಾಗಮಾರಪಲ್ಲಿ : ಅದು ಬೇರೆ, ಈ ಅರಣ್ಯ ಜಮೀನು ಬೇರೆ, ಇದಕ್ಕೆ ಪ್ರತ್ಯೇಕವಾಗಿ ಆದೇಶವನ್ನು ಕಳುಹಿಸಿದ್ದೆವು.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಯಾವ ಅರಣ್ಯ ಜಮೀನಿಗೆ ಆದೇಶ ಕಳುಹಿಸಿದ್ದೀರಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅದನ್ನೇ ಹೇಳುತ್ತಿದ್ದೇನೆ, ಅರಣ್ಯ ಜಮೀನಿಗೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ಬಂದಿದೆ.

ಅಧ್ಯಕ್ಷರು : ನೀವು ಹೇಳುವುದು ಸರಿಯಿದೆ, ಇತ್ತೀಚೆಗೆ ಕಾಗೋಡು ತಿಮ್ಮಪ್ಪನವರು ಓದುವುದು ಬರೆಯುವುದನ್ನು ಮಾಡುವುದಿಲ್ಲ, ನೀವು ಪತ್ರಿಕೆಗಳನ್ನು ನೋಡಿಲ್ಲ.

ಶ್ರೀ. ಕಾಗೋಡು ತಿಮ್ಮಪ್ಪ : ಹದಿನಾಲ್ಕು ಸಾವಿರ ಹೆಕ್ಟೇರ್ ಅರಣ್ಯ ಜುಮೀನನ್ನು ಎಲ್ಲಿ ಹಂಚಿದ್ದಾರೆಂದು ತಾಲ್ಲೂಕುವಾರು ಪಟ್ಟಿಯನ್ನಾದರೂ ಕೊಡುವುದು ಬೇಡವೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನೀವು ಪ್ರತ್ಯೇಕವಾಗಿ ಪ್ರಶ್ನೆಯನ್ನು ಕೇಳಿ, ನಾನು ಪಟ್ಟಿಯನ್ನು ಕೊಡುತ್ತೇನೆ. ಸ್ವಾಮಿ, ಆಗಿಲ್ಲವೆಂದು ಹೇಳಿದರೆ ತಾವು ಅರ್ಥ ಮಾಡಿಕೊಂಡಿಲ್ಲ ಯಾರ್ಯಾರು ಹದಿನೇಳುಸಾವಿರ ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಪೊಸಿಷನ್‌ನಲ್ಲಿದ್ದರು, ಅದರಲ್ಲಿ ಹದಿನಾಲ್ಕು ಸಾವಿರದ ಎಂಟುನೂರ ನಲವತ್ತೆಂಟು ಪಾಯಿಂಟ್ ಎಂಭತ್ತು ಮೂರು ಹೆಕ್ಟೇರ್ ಅರಣ್ಯ ಪ್ರದೇಶವನ್ನು ಖಾಯಂಗೊಳಿಸಲು ಅವರಿಗೆ ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ ಕಾಬೀಜ್ ಎಂದರೆ ಏನು?

ಅಧ್ಯಕ್ಷರು : ಕಾಬೀಜ್ ಎಂದರೆ ಸ್ವತಃ ಅವರ ಸ್ವಾಧೀನದಲ್ಲಿರುವುದು.

ಶ್ರೀ ಗುರುಪಾದಪ್ಪನಾಗಮಾರಪಲ್ಲಿ : ಕಾಬೀಜ್ ಎಂದರೆ ಅವರ ಸ್ವಾಧೀನದಲ್ಲಿದ್ದ ಆ ಜಮೀನಿನಲ್ಲಿ ಅವರದ್ದೇ ಹಕ್ಕಿರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅರಣ್ಯ ಸಚಿವರೆ ಅವರು ಎತ್ತೆತ್ತ ಹೊಡೆದಿದ್ದಾರೆ ಅತ್ತತ್ತ ಕೊಟ್ಟುಬಿಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಆ ರೀತಿ ಕೊಡಲು ಆಗುವುದಿಲ್ಲ. ಎಲ್ಲಿ ಕಾನೂನು ಬದ್ಧವಾಗಿ ಕೊಡಲು ಬರುತ್ತದೆ ಅಲ್ಲಿ ಕೊಟ್ಟಿದ್ದೇವೆ. ತಾವು ಹೇಳಿದಂತೆ ಕೊಟ್ಟರೆ ಅರಣ್ಯವೇ ಇರುವುದಿಲ್ಲ. ತಾವು ಹೇಳಿದಂತೆ ಕೊಡಲು ಸಾಧ್ಯವಾಗುವುದಿಲ್ಲ. 1978ರ ನಂತರ ಆಗಿರುವ ಜಮೀನನ್ನು ನಾವು ಮತ್ತೆ ಕೊಡಲು ಆಗುವುದಿಲ್ಲ. ಅದನ್ನು ರೆಗ್ಯುಲರೈಸ್ ಮಾಡುವುದಕ್ಕಾಗುವುದಿಲ್ಲ. ಅದನ್ನು ವಾಪಸ್ ತೆಗೆದುಕೊಳ್ಳುತ್ತೇವೆ. ಅನಂತರ ಯಾರು ನಮ್ಮ ಅರಣ್ಯದಲ್ಲಿ ಅವರ ಜಮೀನಿದೆಯೆಂದು ಹೇಳುತ್ತಿದ್ದಾರೆ, ಅದು ಅವರ ತಂದೆಯ ಹೆಸರಿನಲ್ಲಿದ್ದದ್ದು ನಿಜವೆಂದು ನನಗೆ ಗೊತ್ತಾಗಿದೆ. ಅದನ್ನೂ ಸಹ ನಮ್ಮ ಇಲಾಖೆಯವರು ಇಲಾಖಾ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಆದ್ದರಿಂದ ನಾನೇ ಸ್ವತಃ ಅಲ್ಲಿಗೆ ಹೋಗಿ ನೋಡುತ್ತೇನೆಂದು ಹೇಳಿದ್ದು. ಅಲ್ಲಿ ಯಾವ ಅನಾಹುತವಾಗಲು ಬಿಡುವುದಿಲ್ಲ, ಅದರ ಬಗ್ಗೆ ತಾವು ಚಿಂತನೆ ಮಾಡಬೇಕಾಗಿಲ್ಲ. ನಾನೇ ಹೋಗಿ ಅದರ ಬಗ್ಗೆ ತೀರ್ಮಾನ ಮಾಡುತ್ತೇನೆ.

(ಗೊಂದಲ)

ಶ್ರೀ ಸಿ.ಹೆಚ್. ವಿಜಯಶಂಕರ್ : ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆ ಸರಿಯಾಗಿ.

ಅಧ್ಯಕ್ಷರು : ನೀವು ಕೇಳಿದ ಪ್ರಶ್ನೆ ನನಗೆ ಅರ್ಥವಾಗಿದೆ, ಭಾಷೆ ವ್ಯತ್ಯಾಸವಾಗುತ್ತದೆ. ನಾನು ನಾಳೆ ಅವರಿಗೆ ನಿವೇನು ಕೇಳಿದ್ದೀರೆಂದು ಹೇಳುತ್ತೇನೆ. ತಾವು 1978ಕ್ಕಿಂತ ಮೊದಲೇ ಅವರು ಇದ್ದರು, ದಾಖಲಾತಿಗಳಿಲ್ಲ, ಅವರುಗಳಿಗೆ ತೊಂದರೆಯಾಗುತ್ತಿದೆಯೆಂದು ಕೇಳಿದ್ದೀರಿ. ಅವರಿಗೆ ಅರ್ಥವಾಗುವ ಹಾಗೆ ನಾಳೆ ಹೇಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅದ್ಯಕ್ಷರೆ, ಅವರು ಕೇಳಿದಂಥಾದ್ದಕ್ಕೂ ನಾನು ಉತ್ತರವನ್ನು ಹೇಳಿದ್ದೇನೆ. ಈಗ ಯಾರು ಮಾಡಿದ್ದಾರೆಂದು ಕೇಳಿದ್ದಾರೆ. ಆಗ ರೆವಿನ್ಯೂ ಡಿಪಾರ್ಟ್‌ಮೆಂಟ್ ಮತ್ತು ನಮ್ಮ ಡಿಪಾರ್ಟ್‌ಮೆಂಟ್ ಸರ್ವೆ ಮಾಡಿ ಹೆಚ್ಚು ಜಮೀನನ್ನು ಕಳುಹಿಸಿತು, ನಂತರ ಅದನ್ನು ಕಡಿಮೆ ಮಾಡಿ ಕೇಂದ್ರ ಸರ್ಕಾರದ ತಂಡದವರು ಬಂದು ಅದನ್ನು ಹದಿನಾರು ಸಾವಿರ ಹೆಕ್ಟಾರ್ ಮಾಡಿತು.

ಶ್ರೀ ಸಿ.ಹೆಚ್. ವಿಜಯ ಶಂಕರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನಮ್ಮ ಕ್ಷೇತ್ರಕ್ಕೂ ಬರಲಿ, ಇದಕ್ಕೂ ಅರಣ್ಯಕ್ಕೂ ಸಂಬಂಧವಿಲ್ಲ. ರೈತರು ಕಳೆದ 30-40 ವರ್ಷಗಳಿಂದ ಮಾಡುತ್ತಿದ್ದಾರೆ.

ಶ್ರೀ ಗುರುಪಾದಪ್ಪ ಮಾಗಮಾರಪಲ್ಲಿ : ನಾನು ನಿಮ್ಮ ಕ್ಷೇತ್ರಕ್ಕೂ ಬರುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಹುಣಸೂರು, ಗೊಕಾಕ್, ಮತ್ತು ಸಾಗರ ಈ ಮೂರು ಜಾಗಕ್ಕೂ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇವರು ಈ ಮೂರು ಕಡೆಗಳಿಗೆ ಹೋಗುವುದಕ್ಕೆ ಬದಲು ವೀರಪ್ಪನ್ ಅನ್ನು ನೋಡಿಕೊಂಡು ಬರುವುದಕ್ಕೆ ಹೋದರೆ ಒಳ್ಳೆಯದೆಂದು ನನಗನಿಸುತ್ತದೆ.

ಅಧ್ಯಕ್ಷರು : ನಾಳೆ ಮೊದಲು ಕೃಷ್ಣ ಮೇಲ್ದಂಡೆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇವೆ, ನಂತರ ಪ್ರಶ್ನೋತ್ತರವಿರುತ್ತದೆ, ಗಮನ ಸೆಳೆಯುವ ಸೂಚನೆಯಲ್ಲಿ ಏಷಿಯನ್ ಏಜ್ ಪತ್ರಿಕೆಯ ಘಟನೆ ಮತ್ತು ಪತ್ರಕರ್ತ ಸತ್ಯನಾರಾಯಣರವರ ಕೊಲೆ ವಿಚಾರವನ್ನು ತೆಗೆದುಕೊಳ್ಳೋಣ. ನಂತರ ಮಾನ್ಯ ಉನ್ನತ ಶಿಕ್ಷಣ ಸಚಿವರು ಸವಿಸ್ತಾರವಾಗಿ ಚರ್ಚೆಯಾಗಲೀ ಎಂದು ಏನು ಹೇಳಿದ್ದಾರೆ ಅದನ್ನು ತೆಗೆದುಕೊಳ್ಳೋಣ, ಹಾಗೂ ಉನ್ನತ ಶಿಕ್ಷಣ ಇಲಾಖೆಗಳ ಬೇಡಿಕೆಗಳ ಬಗ್ಗೆ ಆಗಿರುವುದರಿಂದ ಯಾರು ಸದಸ್ಯರು ಆ ವಿಚಾರದಲ್ಲಿ ಅಪೇಕ್ಷೆ ಪಡುತ್ತಾರೆ, ಅವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಹಕ್ಕು ಚ್ಯುತಿಯನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಅದಕ್ಕೂ ಅವಕಾಶವನ್ನು ಕೊಡೋಣ. ಮಾನ್ಯ ಸೋಮಶೇಖರ್‌ರವರೆ,ಬೇಡಿಕೆಗಳ ಮೇಲೆ ಮಾತನಾಡಲಿ.

ಶ್ರೀ ಬಿ. ಸೋಮಶೇಖರ್ : ಅವರು ಅದನ್ನು ಪ್ರತ್ಯೇಕವಾಗಿ ಪ್ರಸ್ತಾಪ ಮಾಡಬೇಕೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಆ ರೀತಿ ಪ್ರತ್ಯೇಕವಾಗಿ ಏನು ಬೇಡ, ಅದು ಬೇಡಿಕೆಗಳಿಗೆ ಸಂಬಂಧಿಸಿದ್ದೆ ಹೇಳಿಲಿ,

ಶ್ರೀ ಬಿ. ಸೋಮಶೇಖರ್ : ಅವರು ಪ್ರತ್ಯೇಕವಾಗಿ ಮಾತನಾಡಬೇಕೆಂದು ಹೇಳಿರುವುದರಿಂದ ಪ್ರತ್ಯೇಕವಾಗಿಯೇ ಅವರಿಗೆ ಅವಕಾಶವನ್ನು ಕೊಡಿ, ಏನೂ ತೊಂದರೆ ಇಲ್ಲ.

ಅಧ್ಯಕ್ಷರು : ಆಯಿತು. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10 ಗಂಟೆಗೆ ಸೇರುವುದು.

(ಸದನವು ಸಂಜೆ 7 ಗಂಟೆ 4 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 10 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)